

ವಿಯೆಟ್ನಾಂ ಯುದ್ಧ ಕೊನೆಗೊಂಡಿತು ಎಂದು ಸಾರಿದ ಇಂಡಿಪೆಂಡೆನ್ಸ್ ಪ್ಯಾಲೆಸ್

ಆಳದಲ್ಲಿ ಮೈಚಾಚಿ ನಿಂತಿರುವ ಸುರಂಗವನ್ನು ನಿರ್ಮಿಸಲು ಯಾವೊಂದು ಯಂತ್ರವನ್ನೂ ಬಳಸಲಾಗಿಲ್ಲ. ನೆಲ ಅಗೆಯಲು ಸಲಿಕೆ, ಮಣ್ಣು ಆಚೆ ಹಾಕಲು ಬುಟ್ಟಿ– ಈ ಎರಡೇ ಸಾಧನಗಳಿಂದ ‘ಇಲಿ ಬಿಲ’ದ ತಂತ್ರದಲ್ಲಿ ಇಷ್ಟು ದೊಡ್ಡ ಸುರಂಗ ಜಾಲವನ್ನು ನಿರ್ಮಿಸಲಾಗಿದೆ! ಹಗಲು ಹೊತ್ತಿನಲ್ಲಿ ಸುರಂಗದಲ್ಲಿ ಅಡಗಿ ಕೂರುವುದು, ರಾತ್ರಿಯಾದೊಡನೆ ಅಮೆರಿಕ ನೇತೃತ್ವದ ಶತ್ರುಸೈನ್ಯದ ಮೇಲೆ ಮುಗಿಬೀಳುವುದು ವಿಯೆಟ್ನಾಂನ ಗೆರಿಲ್ಲಾ ಪಡೆಯ ಯುದ್ಧತಂತ್ರವಾಗಿತ್ತು.

ಕು ಚಿ ಟನಲ್ ಕುರಿತು ಇನ್ನಷ್ಟು ರೋಚಕ ವಿವರಗಳಿಗೆ ಹೋಗುವ ಮೊದಲು ವಿಯೆಟ್ನಾಂನ ಚರಿತ್ರೆ ಮತ್ತು ಯುದ್ಧದ ಹಿನ್ನೆಲೆ ಮೇಲೊಂದು ಪುಟ್ಟ ನೋಟ ಹರಿಸುವುದು ಒಳಿತು. ನಮ್ಮ ದೇಶವು ಬ್ರಿಟಿಷರ ವಸಾಹತು ಆಗಿದ್ದಂತೆಯೇ ವಿಯೆಟ್ನಾಂ ದೇಶವು ಫ್ರೆಂಚರ ವಸಾಹತು ಆಗಿತ್ತು. ಫ್ರೆಂಚ್ ಆಧಿಪತ್ಯದ ವಿರುದ್ಧ 1946ರಲ್ಲಿ, ಆ ದೇಶದ ಮಹಾನ್ ನಾಯಕ ಹೋ ಚಿ ಮಿನ್ ನೇತೃತ್ವದಲ್ಲಿ ನಿರ್ಣಾಯಕ ‘ವಿಯೆಟ್ ಮಿನ್’ (ವಿಯೆಟ್ನಾಂ ಸ್ವಾತಂತ್ರ್ಯ) ಹೋರಾಟ ಶುರುವಾಯಿತು. ಅದು ‘ಇಂಡೊ–ಚೀನಾ ಯುದ್ಧ’ (ಭಾರತ ಮತ್ತು ಚೀನಾ ಸಂಸ್ಕೃತಿಗಳು ಸಂಗಮಿಸಿದ ದೇಶಗಳನ್ನು ಇಂಡೊ–ಚೀನಾ ಪ್ರದೇಶ ಎಂದು ಕರೆಯಲಾಗುತ್ತಿತ್ತು. ವಿಯೆಟ್ನಾಂ ಆ ಪ್ರದೇಶದ ಒಂದು ದೇಶ) ಎಂದೇ ಹೆಸರಾಯಿತು. ಎಂಟು ವರ್ಷಗಳವರೆಗೆ ನಡೆದ ಈ ಯುದ್ಧದಲ್ಲಿ ವಿಯೆಟ್ನಾಂಗೆ ಸ್ವಾತಂತ್ರ್ಯವೇನೋ ಸಿಕ್ಕಿತು. ಆದರೆ, ಹಾಗೆ ಸ್ವಾತಂತ್ರ್ಯವನ್ನು ಘೋಷಿಸುವಾಗ ಆ ದೇಶವನ್ನು ಇಬ್ಭಾಗ ಮಾಡಲಾಯಿತು. ವಿಯೆಟ್ನಾಂನ ಉತ್ತರ ಭಾಗವು ಹೋ ಚಿ ಮಿನ್ ನೇತೃತ್ವದ ಕಮ್ಯುನಿಸ್ಟ್ ಪಕ್ಷದ ಆಡಳಿತಕ್ಕೆ ಒಳಪಟ್ಟರೆ, ದಕ್ಷಿಣ ಭಾಗದಲ್ಲಿ ರಿಪಬ್ಲಿಕನ್ನರು ಅಧಿಕಾರದ ಚುಕ್ಕಾಣಿ ಹಿಡಿದರು.

ಕಮ್ಯುನಿಸ್ಟರ ಪ್ರಾಬಲ್ಯ ನಿಯಂತ್ರಿಸಲು ಅಮೆರಿಕವು ದಕ್ಷಿಣ ವಿಯೆಟ್ನಾಂನ ರಿಪಬ್ಲಿಕನ್ ಸರ್ಕಾರದ ಪರವಾಗಿ ನಿಂತಿತು. ಉತ್ತರದಿಂದ ದಕ್ಷಿಣದವರೆಗೆ ಕಮ್ಯುನಿಸಂ ಸುಳಿಗಾಳಿ ಸುಳಿಯಬೇಕು ಎಂದು ಬಯಸಿದ ರಷ್ಯಾವು ಉತ್ತರ ವಿಯೆಟ್ನಾಂನ ಕಮ್ಯುನಿಸ್ಟ್ ಸರ್ಕಾರದ ಬೆಂಬಲಕ್ಕೆ ನಿಂತಿತು. ಚೀನಾ ಕೂಡ ಅದಕ್ಕೆ ನೀರೆರೆಯಿತು. ಅಮೆರಿಕ–ರಷ್ಯಾ ಸಿದ್ಧಾಂತಗಳ ಶೀತಲ ಸಮರಕ್ಕೆ ಆಡುಂಬೊಲವಾದ ವಿಯೆಟ್ನಾಂ, ಯುದ್ಧದ ಕುಲುಮೆಯೊಳಗೆ ಬಿದ್ದಿತು. ವಿಯೆಟ್ನಾಂ ಏಕೀಕರಣಕ್ಕಾಗಿ ಕಮ್ಯುನಿಸ್ಟ್ ನೇತೃತ್ವದ ‘ವಿಯೆಟ್ ಕಾಂಗ್’ ಪಡೆಯು ದೇಶದ ದಕ್ಷಿಣ ಭಾಗದಲ್ಲಿ ಸಶಸ್ತ್ರ ಹೋರಾಟಕ್ಕೆ ಇಳಿಯಿತು. ಮೊದಮೊದಲು ರಿಪಬ್ಲಿಕ್ ಆಫ್ ವಿಯೆಟ್ನಾಂ ಸರ್ಕಾರಕ್ಕೆ ಶಸ್ತ್ರಾಸ್ತ್ರ ಪೂರೈಸುವ ಮೂಲಕ ಪರೋಕ್ಷವಾಗಿ ಬೆಂಬಲಕ್ಕೆ ನಿಂತಿದ್ದ ಅಮೆರಿಕ, ಬಳಿಕ ನೇರವಾಗಿಯೇ ಯುದ್ಧಕ್ಕೆ ಇಳಿಯಿತು. ಕು ಚಿ ಟನಲ್ ಅನ್ನು ತನ್ನ ನೆಲೆ ಮಾಡಿಕೊಂಡ ವಿಯೆಟ್ ಕಾಂಗ್ ಪಡೆಯು ಕೆಚ್ಚೆದೆಯ ಶೌರ್ಯ ಪ್ರದರ್ಶಿಸಿತು. 1955ರಿಂದ 1975ರವರೆಗೆ ವಿಯೆಟ್ನಾಂನಲ್ಲಿ ನಡೆದ ಮಹಾ ಸಂಘರ್ಷವು ‘ವಿಯೆಟ್ನಾಂ ಯುದ್ಧ’ ಎಂದೇ ಹೆಸರಾಯಿತು. ಅಮೆರಿಕವು ಅನುಭವಿಸಿದ ವಿರಳ ಸೋಲುಗಳಲ್ಲಿ ಈ ಯುದ್ಧ ಕೂಡ ಒಂದು.

ಈಗ ಮತ್ತೆ ಕು ಚಿ ಟನಲ್‌ಗೆ ಬರೋಣ. ವಿಯೆಟ್ನಾಂ ಜನ ಸಪೂರ ದೇಹದವರು, ಕುಳ್ಳಗಿರುವವರು. ಹೀಗಾಗಿ ಕಿರಿದಾದ ಸುರಂಗದಲ್ಲಿ ಸರಾಗವಾಗಿ ಹೋಗುತ್ತಿದ್ದರು. ಆಜಾನುಬಾಹುಗಳಾದ ಅಮೆರಿಕನ್ ಸೈನಿಕರಿಗೆ ಈ ಸುರಂಗ ಒಂದು ರೀತಿಯಲ್ಲಿ ಅಭೇದ್ಯ ಕೋಟೆಯಾಗಲು ಅದರ ಚಿಕ್ಕ ಗಾತ್ರವೂ ಒಂದು ಕಾರಣ. ಕನಿಷ್ಠ ಮೂರು ಮೀಟರ್‌ನಿಂದ ಗರಿಷ್ಠ 12 ಮೀಟರ್‌ವರೆಗೆ ಆಳವಾಗಿದೆ ಈ ಸುರಂಗ ಜಾಲ. ಒಳಮಾರ್ಗವು ಕನಿಷ್ಠ ಎರಡು ಅಡಿಯಿಂದ ಗರಿಷ್ಠ ಮೂರು ಅಡಿಗಳಷ್ಟೇ ಸುತ್ತಳತೆಯನ್ನು ಹೊಂದಿದೆ. ‘ಈ ಸುರಂಗದಲ್ಲಿ ಮೂರು ಹಂತಗಳಿವೆ, ಗೊತ್ತಾ’ ಎಂದು ಕೇಳುವ ಮೂಲಕ ಆ್ಯಂಡ್ರ್ಯೂ ನಮ್ಮನ್ನು ಮತ್ತಷ್ಟು ರೋಮಾಂಚನಗೊಳಿಸಿದರು. ‘ಕಡಿಮೆ ಆಳದ ಮೊದಲ ಹಂತದಲ್ಲಿ ಯುದ್ಧ ಸನ್ನದ್ಧ ಸ್ಥಿತಿಯಲ್ಲಿ ಯೋಧರು ಇರುತ್ತಿದ್ದರು. ಇನ್ನಷ್ಟು ಆಳದ ಎರಡನೇ ಹಂತವು ಗೆರಿಲ್ಲಾ ಪಡೆಯ ಮುಖ್ಯ ಅಡಗುದಾಣವಾಗಿತ್ತು. ವಿಶ್ರಾಂತಿಗೂ ಗಾಯಾಳುಗಳ ಆರೈಕೆಗೂ ಅಲ್ಲಿ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಹೆಚ್ಚಿನ ಆಳದ ಮೂರನೇ ಹಂತವನ್ನು ‘ಬಾಂಬ್ ಶೆಲ್ಟರ್’ ಆಗಿ ಬಳಸಲಾಗುತ್ತಿತ್ತು. ಅಕ್ಕಿ ಮತ್ತು ಮದ್ದು–ಗುಂಡುಗಳ ಸಂಗ್ರಹಾಗಾರಗಳೂ ಅಲ್ಲಿದ್ದವು. ಹಲವು ಹಳ್ಳಿಗಳಿಗೂ ಈ ಸುರಂಗ ಜಾಲವು ಸಂಪರ್ಕ ಕಲ್ಪಿಸುತ್ತಿತ್ತು’ ನಮ್ಮ ಗೈಡ್ ಹೀಗೆ ವಿವರಿಸುತ್ತಾ ಹೊರಟಿದ್ದರೆ, ಸಮ್ಮೋಹನಕ್ಕೆ ಒಳಗಾದ ನಾವು ಚರಿತ್ರೆಯ ವಿಧೇಯ ವಿದ್ಯಾರ್ಥಿಗಳಂತೆ ಕಥೆಯನ್ನು ಕೇಳುತ್ತಿದ್ದೆವು.

ಒಮ್ಮೆ ಹಾದು ಬರಲು ನಾವೂ ಸುರಂಗದೊಳಗೆ ಇಳಿದೆವು. ಮೊದಲನೇ ಹಂತದಿಂದ ಎರಡನೇ ಹಂತದ ಆಳಕ್ಕೆ ಇಳಿದಾಗ ಒಮ್ಮೆ ಭಯವಾಯಿತು. ಎಲ್ಲೋ ದೂರದಲ್ಲೊಂದು ವಿದ್ಯುತ್ ದೀಪ ಬೆಳಗುತ್ತಿತ್ತು. ಇಲ್ಲದಿದ್ದರೆ ಸುರಂಗದಲ್ಲಿ

## ಮೂರಕ್ಕೆ ಐನೂರೂಪಾಯಿ!

ಯುದ್ಧ ಸ್ಮಾರಕಗಳತ್ತ ಸುತ್ತಾಡುವಾಗ ಒಬ್ಬ ವಿಯೆಟ್ನಾಂ ಬಾಲಕಿ ಸ್ಮರಣಿಕೆಗಳನ್ನು ಹಿಡಿದು ಮಾರಾಟ ಮಾಡುವುದು ಕಣ್ಣಿಗೆ ಬಿತ್ತು. ಅವಳು ನಮ್ಮ ಬಳಿಯೂ ಬಂದಿದ್ದಳು. ನಾವು ಭಾರತದವರು, ಬೆಂಗಳೂರಿನವರು ಎಂದು ಗೊತ್ತಾಗುತ್ತಲೇ ‘ಸಸ್ತಾ ಹೈ, ಲೇ ಲೋ. ಮೂರಕ್ಕೆ ಐನೂರೂಪಾಯಿ’ ಎಂದಳು. ಬೆಂಗಳೂರಿನಿಂದ ಬಂದಿದ್ದ ಇಡೀ ತಂಡದ ಮನಸೂರೆಗೊಂಡಳು.

